<u>ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ</u>

ಸಿ.ಸಿ. ನಂಬ್ರಃ **199/2024**
ಸಿ.ಡಬ್ಲ್ಯೂ- **7**
ಪಿ.ಡಬ್ಲ್ಯೂ-**4**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಧರ ಗೌಡ |
| ತಂದೆಯ ಹೆಸರು | : | ನಾರಾಯಣ ಗೌಡ |
| ಪ್ರಾಯ | : | 43 ವರ್ಷ |
| ಉದ್ಯೋಗ | : | ಉಪ ವಲಯ ಅರಣ್ಯಾಧಿಕಾರಿ |
| ವಾಸ | : | ಹಳ್ಳಿಹೊಳೆ |

ದಿನಾಂಕಃ 01-09-2025 ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಹಕರಿಂದ</u>

ನಾನು 2010 ರಿಂದ 2016 ರವರೆಗೆ ಅಮಾಸ್ಯೆಬೈಲು ಅರಣ್ಯ ವಲಯದಲ್ಲಿ ವನಪಾಲಕ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಶಂಕರನಾರಾಯಣ ವಲಯ ರೆಂಜ್ ಅಧಿಕಾರಿಯವರು ಸರ್ವೆ ನಂ. 146, ಹೆಂಗವಳ್ಳಿ ಗ್ರಾಮ, ಕುಂದಾಪುರ ತಾಲೂಕಿನ ಅತೀಕ್ರಮವಾಗಿ ಅರಣ್ಯ ಪ್ರದೇಶವನ್ನು ಅಳತೆ ಮಾಡಲು ತಿಳಿಸಿದ್ದು ನಾನು ಜಿ ಪಿ ಎಸ್ ಆಧಾರದ ಮೇಲೆ ಅಳತೆ ಮಾಡಿ ಎರಿಯಾ ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನಕಾಶೆ ಕೊಟ್ಟಿರುತ್ತೇನೆ. ಸಾಕ್ಷಿ ನಕಾಶೆಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-11 ಎಂದು ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

3. ಜಿ ಪಿ ಎಸ್ ಆಧಾರದ ಮೇಲೆ ನಕಾಶೆ ಮಾಡಲು ನನಗೆ ಅರ್ಹತೆ ಇರುತ್ತದೆ. ಅತೀಕ್ರಮಣವಾದ ಜಾಗದಲ್ಲಿ ಮರಗಳು ಎಷ್ಟು ಬೆಲೆಯ ಮರಗಳು ಹಾಳಾಗಿರುತ್ತವೆ ಅಂತಾ ಕಂಡುಹಿಡಿಯಲು ಲಗತ್ತು ಸ್ಥಳದ ಮೀಸಲು ಅರಣ್ಯ ಸ್ಥಳದಲ್ಲಿ ಇದ್ದ ಮರಗಳ ಮೌಲ್ಯವನ್ನು ಸ್ಯಾಂಪಲ್ ಪ್ಲಾಟ ಮುಖಾಂತರ ಕಂಡುಹಿಡಿಯಲಾಗಿರುತ್ತದೆ. ಸ್ಯಾಂಪಲ್ ಪ್ಲಾಟ ಎಂದರೆ ಕಾಲು ಎಕರೆ ಅಥವಾ ಪಾಯಿಂಟ್ 1 ಎಕರೆ ಪ್ರದೇಶದಲ್ಲಿ ಬರುವ ಎಲ್ಲಾ ಮರಗಳ ಪಟ್ಟಿ ಮಾಡಿ ಅದರ ಮೌಲ್ಯವನ್ನು ಕಂಡುಹಿಡಿಯುವುದು. ಸದರಿ ಸ್ಯಾಂಪಲ್ ಪ್ಲಾಟನ ಪಟ್ಟಿ ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಎಂದು ಸಾಕ್ಷಿಯ ಸಹಿಯನ್ನು ನಿಪಿ-12(ಎ)

ಎಂದು ಗುರುತಿಸಲಾಯಿತು. ಸದರಿ 2 ದಾಖಲೆಗಳನ್ನು ತಯಾರಿಸಿ ರೆಂಜ್ ಆಪೀಸರ್ ಗೆ ಕೊಟ್ಟಿರುತ್ತೇನೆ.

ಪಾಟಿ ಸವಾಲುಃ ಆರೋಪಿತರ ಪರ ಶ್ರೀ. ಟಿ ಬಿ ಎಸ್ ವಕೀಲರಿಂದ

1. ಅತೀಕ್ರಮಣವಾಗಿದೆ ಎಂದು ಪ್ರಕರಣ 2002 ರಲ್ಲಿ ದಾಖಲಾಗಿರುತ್ತದೆ. ನಾನು 2015 ರಲ್ಲಿ ಅಳತೆ ಮಾಡಿರುತ್ತೇನೆ. ಸರ್ವೆ ನಂ. 146, 2500 ಎಕರೆ ಇರುವಂತ ಇಲ್ ಬ್ಲಾಕ್ ಆಗಿರುತ್ತದೆ. ಅರಣ್ಯ ಇಲಾಖೆಗೆ 575 ಎಕರೆ ಸೇರಿರುತ್ತದೆ. 575 ಎಕರೆ ಪ್ರತ್ಯೇಕವಾಗಿ ಪೋಡಿಯಾಗಿತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಜಿ ಪಿ ಎಸ್ ನ್ನು ಹಿಡಿದುಕೊಂಡು ಒಂದು ಗುಪ್ಪೆಯಿಂದ ಇನ್ನೊಂದು ಗುಪ್ಪೆಗೆ ಹೋಗಿ ಅಳತೆ ಮಾಡಿರುತ್ತೇನೆ. ಜಿ ಪಿ ಎಸ್ ನ್ನು ಹಿಡಿದುಕೊಂಡು 575 ಎಕರೆ ಜಾಗವನ್ನು ಗಡಿಗುರುತಿಸಲಾ ಎಂದರೆ ಸಾಕ್ಷಿ ನನ್ನದು ಪಾರೆಸ್ಟ ಹಾಗೂ ಸರ್ವೆ ಟ್ರೆನಿಂಗ್ 2 ಆಗಿದೆ ಎಂದು ನುಡಿಯುತ್ತಾರೆ.

2. ನಾನು ಅಳತೆ ಮಾಡಿ ವರದಿ ಕೊಟ್ಟ ಸಮಯದಲ್ಲಿ ನನಗೆ ಸರ್ವೆ ಟ್ರೆನಿಂಗ್ ಆಗಿರಲಿಲ್ಲ. ನನಗೆ ಸರ್ವೆ ಟ್ರೆನಿಂಗ್ ನಲ್ಲಿ ಎಪ್ ಎಮ್ ಬಿ, ಪೋಡಿ ಎಂದರೆ ಗೊತ್ತಿರುತ್ತದೆ. ಗಡಿ ಗುರುತಿಸಲು ಪ್ರತ್ಯೇಕವಾಗಿ ಪೋಡಿಯಾಗಿರಬೇಕು ಎಂದರೆ ಸರಿ. ನಾನು ಜಿ ಪಿ ಎಸ್ ಮುಖಾಂತರ ಅಳತೆ ಮಾಡುವಾಗ ಅರಣ್ಯ ಜಮೀನು ಪ್ರತ್ಯೇಕವಾಗಿ ಪೋಡಿಯಾಗಿರಲಿಲ್ಲ. ಸರ್ವೆ ನಂ.146 ರಲ್ಲಿ ಖಾಸಗಿ ವ್ಯಕ್ತಿಗಳ ಸ್ಥಳ ಇರುತ್ತದೆ. ಸದರಿ ಸರ್ವೆ ನಂಬರಲ್ಲಿ ಆರೋಪಿಗೆ ಸಂಬಂಧಿಸಿದ ಸ್ಥಳವೂ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ ಹಾಗೂ ಖಾಸಗಿ ವ್ಯಕ್ತಿಗಳಿಗೆ ಸೇರಿದ ಸ್ಥಳ ಯಾವುದು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ಅತೀಕ್ರಮಣವಾಗಿದೆ ಎಂದು ಹೇಳಿದ ಸ್ಥಳ ದಲ್ಲಿ ರಬ್ಬರ ಮರಗಳು ಇದ್ದಿದ್ದು ಅವುಗಳನ್ನು ನೋಡಿ ಮೌಲ್ಯ ಮಾಪನ ಕೊಟ್ಟಿರುತ್ತೇನೆ. ಮೌಲ್ಯ ಮಾಪನ ಪಟ್ಟಿಯಲ್ಲಿ ರಬ್ಬರ ಮರದ ಮೌಲ್ಯವನ್ನು ನೋಡಿ ಮೌಲ್ಯ ಮಾಡಿರುವುದಿಲ್ಲ. ನಾನು ಮಿಸಲು ಅರಣ್ಯದ ಪಕ್ಕದ ಜಾಗದಲ್ಲಿ ಇದ್ದ ಮರದ ಮೌಲ್ಯವನ್ನು ಹಾಕಿರುತ್ತೇನೆ. ನನ್ನ ಒಟ್ಟಿಗೆ ಸರ್ವೆ ಇಲಾಖೆಯವರು ಇರಲಿಲ್ಲ. ನಾನು ಹೇಳುವ ರೀತಿಯಲ್ಲಿ ಯಾವುದೇ ಜಿ ಪಿ ಎಸ್ ನ ಮೂಲಕ ಸ್ಥಳಕ್ಕೆ ಹೋಗಿದ್ದು ಇಲ್ಲ ಅಳತೆ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧೀಕಾರಿಗಳು ದೋಷಾರೋಪಣ ಪಟ್ಟಿ ಸಲ್ಲಿಸಿದ ಮೇಲೆ ಅದಕ್ಕೆ ಯಾವುದೇ ಸತ್ವ ಇಲ್ಲ ಎಂದು ತಿಳಿದು ನಾನು ದಾಖಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೊಟ್ಟಂತಹ ದಾಖಲೆ ಸುಳ್ಳು ದಾಖಲೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ, ಕೇ, ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ